CALLING ATTENTION NOTICE

Reg.—Probable power cut due to shut down of Generators at Sharavathi for repairs.

SRI S. M. YAHYA (Minister for Industries, Energy and Wakf):— The Karnataka Power Corporation Ltd., have stopped the release of water to the "Vodainabailu tunnel-1" with effect from 1-6-1990 for effecting repairs to the said tunnel. Hence the first five generators at Sharavathi Generating Station will not function for a period of about 6 weeks. Consequently, there is reduction in generation to an extent of 5 Millon units per day.

Due to wide spread rains in the State, there is a reduction in the demand for power by Irrigation pump sets. The consumption has come down by 4 to 5 Million units Per day for the past 10 days (from 20-5-1990). If the same situation continues, there may not by any necessity to impose additional load shedding (I. P. sets are exempted from power cut) on I.P. sets of the farmers.

Further every effort is also being made to get additional quantity of power from the generating stations under the control of the Central Government and from the neighbouring States, to meet the demand.

೧೧.೪೫ ಎ.ಎಂ.

ಶ್ರೀ ಎಂ. ವಿ. ವೆಂಕಟಪ್ಪ.—ಅಕಸ್ಮಾತ್ ಮಳೆ ಸರಿಯಾಗಿ ಬೀಳದೇ ಇದ್ದರೆ, ತಾವು ಬೇರೆ ರಾಜ್ಯಗಳಿಂದ ಪವರ್ ಪರ್ಚೇಸ್ ಮಾಡಿಕೊಂಡ ರೈತರಿಗೆ ಒದಗಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಕೆ.ಹೆಚ್. ರಂಗನಾಥ್.—ಮಳೆ ಬರಲಿ ಎಂದು ಬಯಸಿ ಸ್ವಾಮಿ.

ಶ್ರೀ ಎಸ್. ಎಂ. ಯಾಹ್ಯ —ಮಳೆ ಬಂದಿದೆ. ಮಳೆ ಬರದೇ ಇದ್ದರೆ ಗಂಭೀರ ಪರಿಸ್ಥಿತಿ ಬರುತ್ತಿತ್ತು. ಈಗ ಪಂಪ್‌ಸೆಟ್‌ಗೆ ವಿದ್ಯುತ್ ಇಲ್ಲದೆ ಇದ್ದುದರಿಂದ ೪-೫ ಮಿಲಿಯನ್ ಯೂನಿಟ್ ಸೇವ್ ಆಗುತ್ತಿದೆ. ಆದು ಶರಾವತಿ ಐದು ಯೂನಿಟ್‌ಗಳು ಮುಚ್ಚಿಹೋಗಿದ್ದರಿಂದ. ಈಗ ನೈರುತ್ಯ ಗ್ರಿಡ್ ಆಂಧ್ರದಿಂದ ವಿದ್ಯುತ್ ಕೊಡಲಿಕ್ಕೆ ಸಾಧ್ಯವಿಲ್ಲ ಎಂದು ಅವರು ಹೇಳಿದರು, ತಮಿಳುನಾಡಿನಿಂದಲೂ ಸಿಕ್ಕುತ್ತಿಲ್ಲ. ಕೇರಳಾದಿಂದ ಪ್ರಯತ್ನ ಪಡುತ್ತಿದ್ದೇವೆ. ಮಹಾರಾಷ್ಟ್ರದಿಂದ ನಮಗೆ ಕರೆಂಟ್ ಬರುತ್ತಿತ್ತು ಆದರೆ ಈ ಪವರ್ ೧೫ನೇ ಮೇ ಗೆ ನಿಲ್ಲಿಸಿದ್ದಾರೆ. ಇದುವರೆಗೂ ೬೫ ಪೈಸೆ ಪರ್ ಯೂನಿಟ್ ಕೊಡುತ್ತಿದ್ದರು. ಈಗ ೧ ರೂಪಾಯಿ ೨೫ ಪೈಸೆ ಕೇಳಲಿಕ್ಕೆ ಪ್ರಯತ್ನ ಮಾಡಿದರು. ಬಹಳಷ್ಟು ಹೆಚ್ಚು ಎಂದು ಯೋಚನೆ ಮಾಡಿ, ಪ್ರೈಸ್ ಡಿಟರ್‌ಮಿನ್ ಮಾಡುವವರೆಗೂ ಇರು ಎಂದು ಇದ್ದೆವು. ನಿನ್ನೆ ಮಧ್ಯಾಹ್ನದಿಂದ ಪುನಃ ಮಹಾರಾಷ್ಟ್ರದಿಂದ ಪವರ್ ಬರುತ್ತಿದೆ. ಎಷ್ಟು ದುಡ್ಡು ಕೊಡಬೇಕು ಎನ್ನುವುದರ ಬಗ್ಗೆ ಪ್ರೈಸ್ ಫಿಕ್ಸ್ ಮಾಡುವುದು ನಂತರ ಎಂದು ಕೊಟ್ಟಿದ್ದಾರೆ. ಆದ್ದರಿಂದ, ಈ ಸಂದರ್ಭದಲ್ಲಿ ನಾನು ಮಹಾರಾಷ್ಟ್ರ ಪವರ್ ಕಾರ್ಪೊರೇಷನ್‌ನವರಿಗೆ ನಾನು ಅಭಿನಂದಿಸುತ್ತೇನೆ.

ಛೇರ್ಮನ್.—ಈಗ ಮಾನ್ಯ ಸದಸ್ಯರಾದ ರಮೇಶ್ ಅವರು ಪೀಣ್ಯ ಮತ್ತು ದಾಸರಹಳ್ಳಿಯಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ಉಂಟಾಗಿರುವ ಬಗ್ಗೆ ಪಂಚಾಯತ್ ರಾಜ್ ಮಂತ್ರಿಯವರ ಗಮನವನ್ನು ಸೆಳೆಯುವುದು.

(ಸದಸ್ಯರು ಗೈರು ಹಾಜರು)